# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **259** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ. ಹೆಚ್ ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | **16.07.2024** |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆ ವ್ಯಾಪ್ತಿಗೆ ಬರುವ ಉದ್ದಿಮೆಗಳಾವುವು; | ಭಾರತ ಸರ್ಕಾರವು ದಿನಾಂಕ 1.7.2020 ರಿಂದ ಜಾರಿಗೆ ತಂದಿರುವ ಹೊಸ ವ್ಯಾಖ್ಯಾನದ ಪ್ರಕಾರ ಯಂತ್ರೋಪಕರಣ ಮತ್ತು ಸ್ಥಾವರಗಳಲ್ಲಿ ಒಟ್ಟು ಬಂಡವಾಳ ರೂ.10 ಕೋಟಿ ಮೀರದಂತೆ ಹೂಡಿಕೆ ಮಾಡಿರುವ ಮತ್ತು ವಾರ್ಷಿಕ ವಹಿವಾಟು ರೂ.50 ಕೋಟಿ ಮೀರದಂತೆ ಇರುವ ಉತ್ಪಾದನಾ ಮತ್ತು ಸೇವಾ ಚಟುವಟಿಕೆಯ ವಲಯದ ಉದ್ಯಮಗಳನ್ನು ಸಣ್ಣ ಕೈಗಾರಿಕೆ ಎನ್ನುತ್ತಾರೆ.<br><br>ಕೈಗಾರಿಕಾ ಚಟುವಟಿಕೆಯನ್ನು ಉತ್ಪಾದನಾ ಮತ್ತು ಸೇವಾ ಚಟುವಟಿಕೆಗಳನ್ನಾಗಿ ವರ್ಗೀಕರಿಸಲಾಗಿದ್ದು, ಉತ್ಪಾದನಾ ವಲಯದ ಕೈಗಾರಿಕಾ ಚಟುವಟಿಕೆಗಳನ್ನು ಪ್ರಮುಖವಾಗಿ ಈ ಕೆಳಗಿನಂತೆ ವಿಂಗಡಿಸಲಾಗಿದೆ.<br><br>1. ಕೃಷಿ ಮತ್ತು ಆಹಾರ ಸಂಸ್ಕರಣಾ ಕೈಗಾರಿಕೆಗಳು<br>2. ಜವಳಿ ಮತ್ತು ಸಿದ್ಧ ಉಡುಪು ಕೈಗಾರಿಕೆಗಳು<br>3. ಇಂಜಿನಿಯರಿಂಗ್ ಕೈಗಾರಿಕೆಗಳು<br>4. ಆಟೋಮೊಬೈಲ್ ಕೈಗಾರಿಕೆಗಳು<br>5. ರಾಸಾಯನಿಕ ಕೈಗಾರಿಕೆಗಳು<br>6. ಔಷಧ ಮತ್ತು ಜೈವಿಕ ತಂತ್ರಜ್ಞಾನ ಕೈಗಾರಿಕೆಗಳು<br>7. ಮಾಹಿತಿ ತಂತ್ರಜ್ಞಾನ ಕೈಗಾರಿಕೆಗಳು<br>8. ಪ್ಲಾಸ್ಟಿಕ್ ಆಧಾರಿಕ ಕೈಗಾರಿಕೆಗಳು<br>9. ಕರಕುಶಲ ಉತ್ಪನ್ನ ಕೈಗಾರಿಕೆಗಳು<br>10. ಸ್ಟೀಲ್ ಮತ್ತು ಐರನ್ ಕೈಗಾರಿಕೆಗಳು<br>11. ವಿದ್ಯುತ್ ಮತ್ತು ಎಲೆಕ್ಟ್ರಾನಿಕ್ ಕೈಗಾರಿಕೆಗಳು |
| (ಆ) | ಸಣ್ಣ ಕೈಗಾರಿಕೆ ಇಲಾಖೆ ಅಧೀನಕ್ಕೆ ಬರುವ ಸಾರ್ವಜನಿಕ ನಿಗಮಗಳು/ ಕಂಪನಿಗಳು, ಶಾಸನಬದ್ಧ ಮಂಡಳಿಗಳು, ಉದ್ದಿಮೆಗಳು, ಸೊಸೈಟಿಗಳು ಹಾಗೂ ಇತರೆ ಅಂಗ ಸಂಸ್ಥೆಗಳು ಯಾವುವು: | ಸಣ್ಣ ಕೈಗಾರಿಕೆ ಇಲಾಖೆಯ ಅಧೀನದಲ್ಲಿ ಬರುವ ಸಾರ್ವಜನಿಕ ನಿಗಮಗಳು / ಕಂಪನಿಗಳು ಶಾಸನಬದ್ಧ ಮಂಡಳಿಗಳು, ಉದ್ಯಮಗಳು, ಸೊಸೈಟಿಗಳು, ಹಾಗೂ ಇತರೆ ಅಂಗ ಸಂಸ್ಥೆಗಳ ವಿವರಗಳು ಈ ಕೆಳಗಿನಂತಿವೆ:<br><br>1. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು<br>2. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು<br>3. ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು<br>4. ಕರ್ನಾಟಕ ರಾಜ್ಯ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು<br>5. ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು<br>6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು.<br>7. ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳಿ, ಬೆಂಗಳೂರು. |

| | | |
|---|---|---|
| (ಇ) | ಇವುಗಳಿಗೆ ಸರ್ಕಾರದ ವಿಧಿಸಿರುವ ಮಾನದಂಡಗಳೇನು: | ಈ ನಿಗಮ, ಮಂಡಳಿ ಮತ್ತು ಸಂಸ್ಥೆಗಳ ಪ್ರಮುಖ ಧ್ಯೇಯೋದ್ದೇಶಗಳು / ಮಾನದಂಡಗಳು ಈ ಕೆಳಗಿನಂತಿವೆ.<br><br>1. **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ, ಬೆಂಗಳೂರು**<br>ಸದರಿ ನಿಗಮವು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯವಿರುವ ನಿವೇಶನಗಳನ್ನು ಅಭಿವೃದ್ಧಿ ಪಡಿಸಿ ಹಂಚಿಕೆ ಮಾಡುತ್ತದೆ.<br><br>2. **ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ, ಬೆಂಗಳೂರು**<br>ಸದರಿ ನಿಗಮವು ಕುಶಲಕರ್ಮಿಗಳು ಉತ್ಪಾದಿಸುವ ಉತ್ಪನ್ನಗಳಿಗೆ ಅವಶ್ಯವಾದ ಕಚ್ಚಾಮಾಲನ್ನು ಅವರಿಗೆ ಪೂರೈಸಿ, ಸಿದ್ಧಪಡಿಸಿದ ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ. ಈ ಎಲ್ಲಾ ಕುಶಲಕರ್ಮಿಗಳ ಘಟಕಗಳು ಸೂಕ್ಷ್ಮ ಕೈಗಾರಿಕೆಗಳು ಎಂದು ಗುರುತಿಸಲ್ಪಡುತ್ತಾರೆ.<br><br>3. **ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಬೆಂಗಳೂರು**<br>ಸದರಿ ಮಂಡಳಿಯು ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳ ಅಭಿವೃದ್ಧಿ ಮತ್ತು ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ. ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳು ಸೂಕ್ಷ್ಮ ಕೈಗಾರಿಕೆಗಳಾಗಿರುತ್ತವೆ.<br><br>4. **ಕರ್ನಾಟಕ ರಾಜ್ಯ ತಾಂತ್ರಿಕ ಉನ್ನತೀಕರಣ ಪರಿಷತ್, ಬೆಂಗಳೂರು**<br>ಸದರಿ ಪರಿಷತ್ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ ಉನ್ನತೀಕರಣ, ಗುಣಮಟ್ಟ ಸುಧಾರಣೆ, ಇತ್ಯಾಧಿಯಂಥಹ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತದೆ.<br><br>5. **ಕರ್ನಾಟಕ ಚರ್ಮ ತಾಂತ್ರಿಕ ಸಂಸ್ಥೆ, ಬೆಂಗಳೂರು**<br>ಸದರಿ ಸಂಸ್ಥೆಯು ಸಣ್ಣ ಚರ್ಮ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಅಲ್ಲಿ ಕಾರ್ಯನಿರ್ವಹಿಸಲು ಅಗತ್ಯವಿರುವ ಮಾನವ ಸಂಪನ್ಮೂಲವನ್ನು ತರಬೇತಿ ಮೂಲಕ ಅಭಿವೃದ್ಧಿ ಪಡಿಸುತ್ತದೆ.<br><br>6. **ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ, ಬೆಂಗಳೂರು**<br>ಸದರಿ ನಿಗಮವು ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕುರಿತು ಕಾರ್ಯನಿರ್ವಹಿಸುತ್ತದೆ.<br><br>7. **ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರಿ ಮಹಾಮಂಡಳಿ, ಬೆಂಗಳೂರು**<br>ಸದರಿ ಮಹಾಮಂಡಳಿಯು ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಕುರಿತು ಕಾರ್ಯನಿರ್ವಹಿಸುತ್ತದೆ. |
| (ಈ) | ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸಿಗುತ್ತಿರುವ ಸಾಲ ಸೌಲಭ್ಯ ಗಳಾವುವು: | ಸಣ್ಣ ಕೈಗಾರಿಕೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸಿಗುತ್ತಿರುವ ಸಾಲ ಸೌಲಭ್ಯಗಳ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |

| | | |
|---|---|---|
| (ಉ) | ಕಳೆದ ಎರಡು ವರ್ಷಗಳಿಂದ ಯಾವ ಯಾವ ಸೌಲಭ್ಯಗಳು ಎಷ್ಟೆಷ್ಟು ಕೈಗಾರಿಕೆ ಉದ್ಯಮಗಳಿಗೆ ತಲುಪಿವೆ? | 2022-23 ಮತ್ತು 2023-24 ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ನೀಡಲಾದ ಸೌಲಭ್ಯಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |

**ಸಿಐ 82 ಎಸ್‌ಎಸ್‌ಐ 2024**

**(ಶರಣಬಸಪ್ಪ ದರ್ಶನಾಪೂರ)**
ಸಣ್ಣ ಕೈಗಾರಿಕ ಮತ್ತು ಸಾರ್ವಜನಿಕ
ಉದ್ದಿಮೆಗಳ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 259ಕ್ಕೆ ಅನುಬಂಧ-1

## ಸಣ್ಣ ಕೈಗಾರಿಕೆಗಳ ಸ್ಥಾಪನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸಿಗುವ ಸಾಲ ಸೌಲಭ್ಯ

**ಅ. ಕೈಗಾರಿಕಾ ನೀತಿ 2020-25**

ಕರ್ನಾಟಕ ಸರ್ಕಾರವು 13.08.2020 ರಿಂದ ಹೊಸ ಕೈಗಾರಿಕಾ ನೀತಿ 2020-25 ನ್ನು ಜಾರಿಗೆ ತಂದಿದ್ದು ಇದರಡಿಯಲ್ಲಿ ಹೊಸ ಕೈಗಾರಿಕಾ ಘಟಕ ಸ್ಥಾಪಿಸುವ, ಹಾಲಿ ಇರುವ ಕೈಗಾರಿಕೆಯ ವಿಸ್ತರಣೆಗಾಗಿ/ ಆಧುನೀಕರಣಕ್ಕಾಗಿ/ ವೈವಿಧ್ಯೀಕರಣಕ್ಕಾಗಿ ಬಂಡವಾಳ ಹೂಡುವ ಎಂ.ಎಸ್.ಎಂ.ಇ ಗಳಿಗೆ ಈ ಕೆಳಗಿನ ಪ್ರೋತ್ಸಾಹ ಮತ್ತು ರಿಯಾಯಿತಿಗಳು ದೊರೆಯುತ್ತವೆ.

| ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|

**1. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೂಡಿಕೆ ಉತ್ತೇಜನಾ ಸಹಾಯಧನ**

| | ವಲಯ-1 | ವಲಯ-2 | ವಲಯ-3 | ವಲಯ-1 | ವಲಯ-2 | ವಲಯ-3 |
|---|---|---|---|---|---|---|
| ಸೂಕ್ಷ್ಮ ಕೈಗಾರಿಕೆಗಳು | 30% (ಗರಿಷ್ಟ ರೂ.25ಲಕ್ಷ) | 25% (ಗರಿಷ್ಟ ರೂ.20 ಲಕ್ಷ) | ಇಲ್ಲ | 35% (ಗರಿಷ್ಟ ರೂ.30ಲಕ್ಷ) | 30% (ಗರಿಷ್ಟ ರೂ.25ಲಕ್ಷ) | 10% (ಗರಿಷ್ಟ ರೂ.10 ಲಕ್ಷ) |
| ಸಣ್ಣ ಕೈಗಾರಿಕೆಗಳು | 25% (ಗರಿಷ್ಟ ರೂ.100ಲಕ್ಷ) | 20% (ಗರಿಷ್ಟ ರೂ.90ಲಕ್ಷ) | ಇಲ್ಲ | 30% (ಗರಿಷ್ಟ ರೂ.105ಲಕ್ಷ) | 25% (ಗರಿಷ್ಟ ರೂ.95ಲಕ್ಷ) | 10% (ಗರಿಷ್ಟ ರೂ.25 ಲಕ್ಷ) |

**ಮಧ್ಯಮ ಕೈಗಾರಿಕೆಗಳು**

| ವಲಯ | ಶೇಕಡಾವಾರು ವಹಿವಾಟು | ಗರಿಷ್ಟ ಅವದಿ (ವರ್ಷ) | ಸ್ಥಿರಾಸ್ಥಿಯ ಮಿತಿ |
|---|---|---|---|
| 1 | 2.50% | 6 | ಸ್ಥಿರಾಸ್ಥಿಯ 40 % |
| 2 | | 5 | ಸ್ಥಿರಾಸ್ಥಿಯ 35 % |
| 3 | ಇಲ್ಲ | | |

ಬಂಡವಾಳ ಹೂಡಿಕೆ ಸಹಾಯಧನವನ್ನು ಉದ್ಯಮಶೀಲರು ಹೂಡುವ ನಿವೇಶನ, ಕಟ್ಟಡ, ಯಂತ್ರೋಪಕರಣ ಇವುಗಳನ್ನು ಸ್ಥಿರಾಸ್ಥಿ ಎಂದು ಪರಿಗಣಿಸಿ ಇದರ ಶೇಕಡವಾರು ನೀಡಲಾಗುವುದು.

**2. ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ ಮತ್ತು ನೋಂದಣಿ ಶುಲ್ಕದಲ್ಲಿ ರಿಯಾಯಿತಿ:**

ಅರ್ಹತೆ

1. ರಾಜ್ಯ ಹಣಕಾಸು ನಿಗಮ,
2. ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು,
3. ವಾಣಿಜ್ಯ ಬ್ಯಾಂಕ್‌ಗಳು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು,
4. ಸಹಕಾರಿ ಬ್ಯಾಂಕ್‌ಗಳು, ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಮಂಡಳಿ,
5. ಖಾದಿ ಮತ್ತು ಗ್ರಾಮೀಣ ಕೈಗಾರಿಕೆ ಆಯೋಗ(ಕಮಿಷನ್),
6. ಕರ್ನಾಟಕ ರಾಜ್ಯ ಪ.ಜಾತಿ/ಪ.ವರ್ಗ ಅಭಿವೃದ್ಧಿ ನಿಗಮ,
7. ಕರ್ನಾಟಕ ರಾಜ್ಯ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ

ಮತ್ತಿತರ ಸಂಸ್ಥೆಗಳಿಂದ ಸಾಲ ಪಡೆಯಲಿಕ್ಕಾಗಿ ಸಾಲ ಒಪ್ಪಂದ, ಸಾಲ ಕರಾರು ಪತ್ರ, ಅಡಮಾನ, ಅಡಮಾನಿಕೆ ದಸ್ತಾವೇಜುಗಳಿಗಾಗಿ ನೀಡಬೇಕಾದ ಸ್ಟಾಂಪ್ ಶುಲ್ಕದಿಂದ ಆರಂಭದ 5 ವರ್ಷಗಳ ಕಾಲ ಮಾತ್ರ ವಿನಾಯಿತಿ ನೀಡಲಾಗುವುದು.

ಕೈಗಾರಿಕೋದ್ಯಮಿಗಳು, ಕೈಗಾರಿಕಾ ನಿವೇಶನ, ಷೆಡ್‌ಗಳು, ಕೈಗಾರಿಕಾ ಟೆನ್‌ಮೆಂಟ್ಸ್ ಮತ್ತು ಬಹುಮಹಡಿ ಸಂಕೀರ್ಣದ ಕಾರ್ಖಾನೆಗಳನ್ನು

1. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ,
2. ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ,
3. ಕಿಯಾನಿಕ್ಸ್,
4. ಕೈಗಾರಿಕಾ ಸಹಕಾರ ಸಂಘಗಳು,
5. ಅನುಮೋದಿತ ಖಾಸಗಿ ಕೈಗಾರಿಕಾ ವಸಾಹತುಗಳು/ಪಾರ್ಕ್‌ಗಳು,
6. ಆಹಾರ ಪಾರ್ಕ್‌ಗಳು,
7. ಕರ್ನಾಟಕ/ಭಾರತ ಸರ್ಕಾರದಿಂದ ರಚಿಸಲಾದ ವಿಶೇಷ ಉದ್ದೇಶ ವಾಹನ(ಎಸ್/ಪಿ.ವಿ)ಗಳಿಂದ ಹಂಚಿಕೆ ಪಡೆಯುವಲ್ಲಿ ಕೈಗಾರಿಕಾ ಉದ್ದಿಮೆಗಳು ಮಾಡಿಕೊಂಡ ಭೋಗ್ಯ ಪತ್ರ (ಲೀಸ್ ಡೀಡ್ಸ್), ಭೋಗ್ಯ ಮತ್ತು ಕ್ರಯ ಪತ್ರ, ಉಪ-ಭೋಗ್ಯ(ಸಬ್ ಲೀಸ್) ಹಾಗೂ ಪರಿಪೂರ್ಣ ಕ್ರಯ ಪತ್ರಗಳಿಗೂ ಈ ಕೆಳಗಿನಂತೆ ವಿನಾಯಿತಿ ನೀಡಲಾಗುತ್ತದೆ.

**2.ಅ ಎಂಎಸ್ಎಂಇಗಳಿಗೆ ಸ್ಟಾಂಪ್ ಶುಲ್ಕ ವಿನಾಯಿತಿ**

| | |
|---|---|
| ವಲಯ 1 : 100%<br>ವಲಯ 2 : 100% | ವಲಯ 1 : 100%<br>ವಲಯ 2 : 100% |

| ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|
| ವಲಯ 3 : ಇಲ್ಲ | ವಲಯ 3 : 75% |
| **2.ಆ ಎಂಎಸ್ಎಂಇಗಳಿಗೆ ನೋಂದಣಿ ಶುಲ್ಕದಲ್ಲಿ ರಿಯಾಯಿತಿ:** | |
| ವಲಯ1, ವಲಯ 2 : ರೂ.1000/–ಕ್ಕೆ ರೂ.1/–<br>ವಲಯ 3 : ಇಲ್ಲ | ಎಲ್ಲಾ ವಲಯಗಳಿಗೆ :ರೂ.1000/–ಕ್ಕೆ ರೂ.1/– |
| **3. ಎಂಎಸ್ಎಂಇಗಳಿಗೆ ಭೂ ಪರಿವರ್ತನಾ ಶುಲ್ಕ ಮರುಪಾವತಿ** | |
| ವಲಯ 1 : 100%<br>ವಲಯ 2 : 100%<br>ವಲಯ 3 : ಇಲ್ಲ | ವಲಯ 1 : 100%<br>ವಲಯ 2 : 100%<br>ವಲಯ 3 : 75% |
| **4. ಎಂಎಸ್ಎಂಇಗಳಿಗೆ ವಿದ್ಯುತ್‌ಶುಲ್ಕದ ಮೇಲಿನ ತೆರಿಗೆ ವಿನಾಯಿತಿ** | |
| ವಲಯ 1 : 100% 7 ವರ್ಷದವರೆಗೆ<br>ವಲಯ 2 : 100% 6 ವರ್ಷದವರೆಗೆ<br>ವಲಯ 3 : ಇಲ್ಲ | ವಲಯ1 : 100% 8 ವರ್ಷದವರೆಗೆ<br>ವಲಯ 2 : 100% 7 ವರ್ಷದವರೆಗೆ<br>ವಲಯ 3 : 100% 4 ವರ್ಷದವರೆಗೆ |
| **5. ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ** | |
| **ವಲಯ 1 ಮತ್ತು 2ಕ್ಕೆ ಮಾತ್ರ:** ಬಳಸಿದ ಪ್ರತಿ ವಿದ್ಯುತ್ ಯುನಿಟ್ ಒಂದಕ್ಕೆ ಪಾವತಿಸಿದ ವಿದ್ಯುತ್ ಶುಲ್ಕಕ್ಕೆ ರೂ.1/–ರಂತೆ 3 ವರ್ಷಗಳ ಅವಧಿವರೆಗೆ ವಿದ್ಯುತ್‌ಚ್ಛಕ್ತಿ ಸಬ್ಸಿಡಿ. | |
| **6. ತಂತ್ರಜ್ಞಾನ ಮೇಲ್ದರ್ಜೆಗೇರಿಸುವ ಸಾಲದ ಮೇಲೆ ಬಡ್ಡಿ ಸಹಾಯಧನ** | |
| ವಲಯ1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ–ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ | ವಲಯ 1 : 5% 6 ವರ್ಷದವರೆಗೆ *<br>ವಲಯ 2 : 5% 5 ವರ್ಷದವರೆಗೆ *<br>ವಲಯ 3 : 5% 5 ವರ್ಷದವರೆಗೆ *<br><br>* ಭಾರತ ಸರ್ಕಾರದ ಸಿಎಲ್‌ಸಿಎಸ್‌ಎಸ್(ಕ್ರೆಡಿಟ್ ಲಿಂಕ್ಡ್ ಕ್ಯಾಪಿಟಲ್ ಸಬ್ಸಿಡಿ ಸ್ಕೀಂ–ಸಾಲ ಸಂಯೋಜಿತ ಬಂಡವಾಳ ಸಹಾಯಧನ ಯೋಜನೆ) ಅಡಿಯಲ್ಲಿ ಒಳಗೊಂಡಿರದ ಕೆಎಸ್ಎಫ್‌ಸಿ ಮತ್ತು ಅನುಸೂಚಿತ (ಷೆಡ್ಯೂಲ್ಡ್) ವಾಣಿಜ್ಯ ಬ್ಯಾಂಕ್‌ಗಳಿಂದ ಪಡೆದ ಸಾಲಗಳಿಗೆ |
| **7. ತಂತ್ರಜ್ಞಾನ ಅಳವಡಿಕೆಗೆ** | |
| **ಎಲ್ಲಾ ವಲಯಗಳಿಗೆ**<br>ವೆಚ್ಚದ 25% (ಗರಿಷ್ಠ ರೂ.50,000/–) ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ | **ಎಲ್ಲಾ ವಲಯಗಳಿಗೆ**<br>ವೆಚ್ಚದ 50% (ಗರಿಷ್ಠ ರೂ.1 ಲಕ್ಷ )ಅನುಬಂಧ 8ರಲ್ಲಿ ಉಲ್ಲೇಖಿಸಲಾದ ಭಾರತ ಸರ್ಕಾರದ ಮಾನ್ಯತೆ ಪಡೆದ ಪ್ರಯೋಗಾಲಯಗಳಿಂದ ತಂತ್ರಜ್ಞಾನ ಅಳವಡಿಸಿದ್ದಕ್ಕಾಗಿ . |
| **8. ತಂತ್ರಜ್ಞಾನ ವ್ಯವಹಾರ ವಿಕಸನ ಕೇಂದ್ರ (ಟಿಬಿಐಸಿ)** | |
| **ಎಲ್ಲಾ ವಲಯಗಳಿಗೆ**<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠ ರೂ.50.00 ಲಕ್ಷ) (ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ) | **ಎಲ್ಲಾ ವಲಯಗಳಿಗೆ**<br>ವಿಕಸನ ಕೇಂದ್ರ (ಇನ್‌ಕ್ಯುಬೇಷನ್ ಕೇಂದ್ರ)ದ ವೆಚ್ಚದ 25% (ಗರಿಷ್ಠರೂ.60.00 ಲಕ್ಷ)(ವಲಯ 1 ರಲ್ಲಿ ಕನಿಷ್ಠ 1 ಟಿಬಿಐಸಿ ) |
| **9. ಗುಣಮಟ್ಟ ಪ್ರಮಾಣೀಕರಣಕ್ಕೆ ಉತ್ತೇಜನ** | |
| **ಎಲ್ಲಾ ವಲಯಗಳಿಗೆ**<br>ಐಎಸ್ಓ ಸರಣಿ ಪ್ರಮಾಣೀಕರಣ ವೆಚ್ಚದ 75% (ಗರಿಷ್ಠ ರೂ.75,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.20,000/–) & 25% ವೆಚ್ಚ (ಗರಿಷ್ಠ ರೂ.50,000/–)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ | **ಎಲ್ಲಾ ವಲಯಗಳಿಗೆ**<br>ಐಎಸ್ಓ ಸರಣಿ ಪ್ರಮಾಣೀಕರಣ ವೆಚ್ಚದ 75% (ಗರಿಷ್ಠ ರೂ.1,00,000)<br>ಬಿಐಎಸ್ ಪ್ರಮಾಣೀಕರಣ: ಬಿಐಎಸ್(ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್)ಗೆ ಪಾವತಿ ಮಾಡಬೇಕಾದ ಶುಲ್ಕದ 50% (ಗರಿಷ್ಠ ರೂ.25,000/–) & 25% ವೆಚ್ಚ (ಗರಿಷ್ಠ ರೂ.1,00,0000/–)ಬಿಐಎಸ್ ಅನುಮೋದಿಸಿದಂತೆ ಪರೀಕ್ಷಾ ಉಪಕರಣ ಖರೀದಿಗೆ |
| **10. ಮಳೆ ನೀರು ಕೊಯ್ಲು (ಎಲ್ಲಾ ವಲಯಗಳಿಗೆ )** | |
| ಉಪಕರಣದ ಬೆಲೆಯ 50% (ಗರಿಷ್ಠ ರೂ.2 ಲಕ್ಷ ) | ಉಪಕರಣದ ಬೆಲೆಯ 75% (ಗರಿಷ್ಠ ರೂ.2.50 ಲಕ್ಷ ) |
| **11. ತ್ಯಾಜ್ಯ ನೀರು ಸಂಸ್ಕರಣೆ (ಎಲ್ಲಾ ವಲಯಗಳಿಗೆ )** | |
| ಉಪಕರಣದ ಬೆಲೆಯ 50% (ಗರಿಷ್ಠ ರೂ.7.50 ಲಕ್ಷ) | ಉಪಕರಣದ ಬೆಲೆಯ 75% (ಗರಿಷ್ಠ ರೂ.8.50 ಲಕ್ಷ ) |
| **12. ನೀರಿನ ಲೆಕ್ಕ ಪರಿಶೋಧನೆ(ಆಡಿಟ್)ಗೆ ತಗುಲಿದ ವೆಚ್ಚ ಮರುಪಾವತಿ (ಎಲ್ಲಾ ವಲಯಗಳಿಗೆ )** | |
| 75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) | 75% ಗರಿಷ್ಠ ರೂ.1ಲಕ್ಷ ಪ್ರತೀ ನೀರಿನ ಆಡಿಟ್‌ಗೆ (ಒಂದು ಬಾರಿಗೆ) |

| ಸಾಮಾನ್ಯ ಪ್ರವರ್ಗ | ವಿಶೇಷ ಪ್ರವರ್ಗ (ಪ.ಜಾತಿ/ಪ.ಪಂ, ಮಹಿಳೆಯರು, ಅಲ್ಪಸಂಖ್ಯಾತರು, ವಿಕಲಾಂಗರು ಹಾಗೂ ಮಾಜಿಉದ್ಯಮಶೀಲ ಸೈನಿಕರು. |
|---|---|
| 13. ಶೂನ್ಯ ತ್ಯಾಜ್ಯ/ ಹೊರಸೂಸುವಿಕೆ (ಎಲ್ಲಾ ವಲಯಗಳಿಗೆ ) | |
| ಉಪಕರಣದ ಬೆಲೆಯ 50% (ಗರಿಷ್ಟ ರೂ.7.50ಲಕ್ಷ) | ಉಪಕರಣದ ಬೆಲೆಯ 75% (ಗರಿಷ್ಟ ರೂ.8.50ಲಕ್ಷ) |
| 14. ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ಗಳ ಮರುಬಳಕೆ (ಎಲ್ಲಾ ವಲಯಗಳಿಗೆ ) | |
| ವಿಎಫ್ಎನ ಶೇ.5ರಷ್ಟು (ಗರಿಷ್ಟ ರೂ.10ಲಕ್ಷ) | ವಿಎಫ್ಎನ ಶೇ.5ರಷ್ಟು (ಗರಿಷ್ಟ ರೂ.12ಲಕ್ಷ) |
| 15. ತ್ಯಾಜ್ಯ ಸಂಸ್ಕರಣಾ ಘಟಕ(ಇಟಿಪಿ) ಸ್ಥಾಪನೆಗೆ ಸಹಾಯಧನ (ಎಲ್ಲಾ ವಲಯಗಳಿಗೆ ) | |
| ಇಟಿಪಿಯ ವೆಚ್ಚದ ಶೇ.50 ರಷ್ಟು (ಗರಿಷ್ಟ ರೂ.50 ಲಕ್ಷ) | ಇಟಿಪಿಯ ವೆಚ್ಚದ ಶೇ.75 ರಷ್ಟು (ಗರಿಷ್ಟ ರೂ.60 ಲಕ್ಷ) |
| 16. ವಿದ್ಯುತ್ ತೆರಿಗೆ ವಿನಾಯಿತಿ (ರಫ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಎಲ್ಲಾ ಪ್ರವರ್ಗದ ಉದ್ಯಮಶೀಲರಿಗೆ) | |
| ಹೊಸ ಎಂಎಸ್ಎಂಇ ರಫ್ತು ಉದ್ದಿಮೆಗೆ ವಲಯ 3 ರಲ್ಲಿ ಮೊದಲ 5 ವರ್ಷಗಳವರೆಗೆ 100% ವಿದ್ಯುತ್ ತೆರಿಗೆ ವಿನಾಯಿತಿ (ಒಟ್ಟು ವಹಿವಾಟಿನ ಶೇ.50ರಷ್ಟು ರಫ್ತು ಇರಬೇಕು). | |
| 17. ಕಾರ್ಯನಿರ್ವಹಣಾ ಸಬ್ಸಿಡಿ (ರಫ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಎಲ್ಲಾ ಪ್ರವರ್ಗದ ಉದ್ಯಮಶೀಲರಿಗೆ) | |
| ತಮ್ಮ ರಫ್ತನ್ನು ಮುಂದಿನ ವರ್ಷಗಳಲ್ಲಿ ದ್ವಿಗುಣಗೊಳಿಸುವ ಎಂಎಸ್ಎಂಇ ಕೈಗಾರಿಕೆಗಳಿಗೆ ಎಲ್ಲಾ ವಲಯಗಳಲ್ಲಿ ಎಫ್ಒಬಿಯ 1% ಮೌಲ್ಯವನ್ನು ಪಾವತಿಸಲಾಗುವುದು. ಗರಿಷ್ಟ ಮಿತಿ ರೂ.10. ಲಕ್ಷ/ಘಟಕವೊಂದಕ್ಕೆ | |
| 18. ಬ್ಯಾಂಕ್ ಶುಲ್ಕ (ರಫ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಎಲ್ಲಾ ಪ್ರವರ್ಗದ ಉದ್ಯಮಶೀಲರಿಗೆ) | |
| ಎಲ್ಲಾ ವಲಯಗಳಲ್ಲಿ ಎಂಎಸ್ಎಂಇ ಕ್ಷೇತ್ರದ ಎಲ್ಲಾ ರಫ್ತಿನ ಇಬಿಆರ್ಸಿ ಪ್ರಸ್ತುತಪಡಿಸಿದಲ್ಲಿ ಬ್ಯಾಂಕ್ ಶುಲ್ಕಗಳ ಮರುಪಾವತಿ. ಗರಿಷ್ಟ ಘಟಕವೊಂದಕ್ಕೆ ರೂ.1ಲಕ್ಷ | |
| 19. ಇಸಿಜಿಸಿ ಶುಲ್ಕ (ರಫ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಎಲ್ಲಾ ಪ್ರವರ್ಗದ ಉದ್ಯಮಶೀಲರಿಗೆ) | |
| ಎಲ್ಲಾ ವಲಯಗಳಲ್ಲಿ ಎಂಎಸ್ಎಂಇಗಳಿಗೆ ಇಸಿಜಿಸಿ (ರಫ್ತು ಸಾಲ ಖಾತರಿ ನಿಗಮ) ಶುಲ್ಕದ ಮರುಪಾವತಿ 100% ವರೆಗೂ; ಗರಿಷ್ಟ ರೂ.1.00 ಲಕ್ಷ/ಘಟಕ/ವರ್ಷ | |
| 20. ಪ್ರಮಾಣೀಕರಣ ಶುಲ್ಕ (ರಫ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಎಲ್ಲಾ ಪ್ರವರ್ಗದ ಉದ್ಯಮಶೀಲರಿಗೆ) | |
| ಎಲ್ಲಾ ವಲಯಗಳಲ್ಲಿ ಶಾಸನಬದ್ಧ ಪ್ರಮಾಣ ಪತ್ರಗಳಾದ ಸಿಇ (ಚಾರ್ಟರ್ಡ್ ಎಂಜಿನಿಯರ್ ಸರ್ಟಿಫಿಕೇಟ್),ಚೀನಾ ಕಂಪಲ್ಸರಿ ಸರ್ಟಿಫಿಕೇಟ್((ಸಿಸಿಸಿ), ಜಿಎಂಪಿ(ಉತ್ತಮ ಉತ್ಪಾದನಾ ಅಭ್ಯಾಸ), ಫೈಟೋ ಸ್ಯಾನಿಟರಿ ಪ್ರಮಾಣಪತ್ರ, ಐಎಫ್ಎಸ್-ಬಿಆರ್ಸಿ-ಎಫ್ಎಸ್ಎಸ್22000 ಪ್ರಮಾಣಪತ್ರಗಳ ಮೇಲಿನ ವೆಚ್ಚದ 50% ಗರಿಷ್ಟ 1.00 ಲಕ್ಷ/ಒಂದು ಘಟಕಕ್ಕೆ ಮರುಪಾವತಿ. | |
| 21. ಪ್ರಮಾಣ ಪತ್ರ ಪಡೆಯಲು ಶುಲ್ಕ (ರಫ್ತು ಕೈಗಾರಿಕೆಗಳನ್ನು ಸ್ಥಾಪಿಸುವ ಎಲ್ಲಾ ಪ್ರವರ್ಗದ ಉದ್ಯಮಶೀಲರಿಗೆ) | |
| ಎಲ್ಲ ವಲಯಗಳಲ್ಲಿ ನವದೆಹಲಿ ಅಥವಾ ಇನ್ನಾವುದೇ ಮಾನ್ಯತೆ ಪಡೆದ ಸಂಸ್ಥೆ ನಡೆಸುವ ಆಮದು-ರಫ್ತು ನಿರ್ವಹಣೆ ಕೋರ್ಸ್‌ಗೆ ಪಾವತಿಸಿದ ಶುಲ್ಕ ಮರುಪಾವತಿ ಕನಿಷ್ಟ 4 ತಿಂಗಳ ಅವಧಿ ಕೋರ್ಸ್‌ಗೆ 50% ಶುಲ್ಕ, ಗರಿಷ್ಟ ರೂ.25,000/ಅಭ್ಯರ್ಥಿ/ಕೋರ್ಸ್‌ಗೆ.<br>ಉತ್ತೇಜನವು ನೀತಿ ಅವಧಿಯಲ್ಲಿ ಒಂದು ಕೋರ್ಸ್‌ಗೆ ಒಂದು ಬಾರಿಗೆ ಲಭ್ಯವಿದ್ದು ಒಂದು ಘಟಕಕ್ಕೆ ಗರಿಷ್ಟ 1.00 ಲಕ್ಷ ರೂ ನೀಡಲಾಗುವುದು. | |

**ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಪ್ರಾರಂಭಿಸುವವರಿಗೆ/ ಪ್ರಾರಂಭಿಸದವರಿಗೆ ಇರುವ ಇತರೆ ಯೋಜನೆಗಳು ಮತ್ತು ಅವುಗಳಡಿ ದೊರೆಯುವ ಸೌಲಭ್ಯಗಳು.**

1. **ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಹೊಸ ಹೂಡಿಕೆಗಾಗಿ ಸಾಲ ಪಡೆದು ಸ್ಥಾಪನೆಗೊಳ್ಳುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಶೇ 6% ಬಡ್ಡಿ ಸಹಾಯಧನ ಯೋಜನೆ**

**ಯೋಜನೆಯ ಅನ್ವಯ :**

1. ಈ ಯೋಜನೆಯು ಕೆ.ಎಸ್.ಎಫ್.ಸಿ ಯಿಂದ **ವಿಸ್ತರಣೆ / ಆಧುನೀಕರಣ / ವೈವಿಧ್ಯೀಕರಣ / ತಾಂತ್ರಿಕ ಉನ್ನತೀಕರಣ ಮೂಲಕ ಕಟ್ಟಡ ಮತ್ತು ಯಂತ್ರೋಪಕರಣಗಳಲ್ಲಿ** ಹೂಡಿಕೆಗಾಗಿ ಸಾಲ ಪಡೆಯುವ ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕಾ ಘಟಕಗಳಿಗೆ ಮಾತ್ರ ಅನ್ವಯಿಸುತ್ತದೆ.
2. ಕರ್ನಾಟಕ ಸರ್ಕಾರ/ ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಬಡ್ಡಿ ಸಹಾಯಧನ ಪಡೆದ ಘಟಕಗಳು ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹವಿರುವುದಿಲ್ಲ.
3. ಈ ಯೋಜನೆಯು ದುಡಿಮೆ ಬಂಡವಾಳ ಸಾಲಕ್ಕೆ ಅನ್ವಯಿಸುವುದಿಲ್ಲ.

**ಸಾಲದ ಮೊತ್ತ :**

1. **ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಘಟಕಗಳಿಗೆ :** ರೂ.500.00 ಲಕ್ಷ ಅವಧಿ ಸಾಲ (ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ)
2. ಸೂಕ್ಷ್ಮ ಮತ್ತು ಸಣ್ಣ ಉತ್ಪಾದನಾ ಕೈಗಾರಿಕೆಗಳಿಗೆ ಸಾಲದ ಮೊತ್ತವು ರೂ.500.00 ಲಕ್ಷ ಮೀರಿದಲ್ಲಿ, ಬಡ್ಡಿ ಸಹಾಯಧನಕ್ಕೆ ಸಾಲದ ಮೊತ್ತವನ್ನು ರೂ.500.00 ಲಕ್ಷಗಳವರೆಗೆ ಪರಿಗಣಿಸಿ, ಹೆಚ್ಚುವರಿ ಸಾಲದ ಮೊತ್ತಕ್ಕೆ ಕೆ.ಎಸ್.ಎಫ್.ಸಿಯ ಒಪ್ಪಂದಿತ ಬಡ್ಡಿದರ (contract rate of interest) ವಿಧಿಸಲಾಗುವುದು.
3. ಘಟಕವು ಕೆ.ಎಸ್.ಎಫ್.ಸಿ ಯಿಂದ 'ಕಾಂಪೋಸಿಟ್ ಸಾಲ' ಪಡೆದಿದ್ದಲ್ಲಿ ಅದರಲ್ಲಿ 'ಅವಧಿ ಸಾಲ'ದ ಮೊತ್ತ ಅನ್ವಯವಾಗುವ ಕಟ್ಟಡ ಮತ್ತು ಉತ್ಪಾದನೆಗೆ ನೇರವಾಗಿ ಉಪಯೋಗಿಸುವ ಯಂತ್ರೋಪಕರಣ ಮೇಲೆ ಅನ್ವಯಿಸುತ್ತದೆ.

**ಸಹಾಯಧನದ ಬಿಡುಗಡೆ** :ಬಡ್ಡಿ ಸಹಾಯಧನವನ್ನು ಮುಂಗಡವಾಗಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಗೆ ನೇರವಾಗಿ ಬಿಡುಗಡೆ ಮಾಡುವುದು. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಅರ್ಹ ಘಟಕಗಳಿಗೆ ಆಯಾ ತಿಂಗಳು ಸರ್ಕಾರ ಬಿಡುಗಡೆ ಮಾಡಿದ ಅನುದಾನದಿಂದ ಭರಿಸುವುದು.

**ಆ. ಪರಿಶಿಷ್ಟ ಜಾತಿಯ ಮತ್ತು ಪರಿಶಿಷ್ಟ ವರ್ಗದ ಅಭಿವೃದ್ಧಿಗೆ ಇರುವ ಕಾರ್ಯಕ್ರಮಗಳು:**

**1. ಗುಡಿ ಮತ್ತು ಸೂಕ್ಷ್ಮ ಕೈಗಾರಿಕಾ ಘಟಕಗಳು/ಕುಶಲಕರ್ಮಿಗಳಿಗೆ ಬ್ಯಾಂಕಿನ ಸಾಲದ ಮೇಲೆ ಶೇ.60 ಸಹಾಯಧನ ಕಾರ್ಯಕ್ರಮ**

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದಫಲಾನುಭವಿಗಳು ಗುಡಿ ಮತ್ತು ಅತೀ ಸೂಕ್ಷ್ಮ ಕೈಗಾರಿಕಾ ಘಟಕಗಳ ಸ್ಥಾಪನೆಗೆ ಹಣಕಾಸು ಸಂಸ್ಥೆಗಳಿಂದ ಸಾಲದ ಮಂಜೂರಾತಿ ಪಡೆದ ನಂತರ ಇಲಾಖೆಯಿಂದ ಈ ಯೋಜನೆಯಡಿ ಅರ್ಹ ಸಹಾಯಧನ ಮಂಜೂರು ಮಾಡಿ, ಸಾಲದ ಮೊದಲನೇ ಕಂತು ಬಿಡುಗಡೆಯಾದ ಮೇಲೆ ಸದರಿ ಸಹಾಯಧನ ಮೊತ್ತವನ್ನು ಸಂಬಂಧಪಟ್ಟ ಬ್ಯಾಂಕ್/ಹಣಕಾಸು ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುವುದು.

- ಪ್ರವರ್ತಕರು ಯೋಜನಾ ವೆಚ್ಚದ ಶೇ 10% ಭರಿಸಬೇಕು,
- ಯೋಜನಾ ವೆಚ್ಚದ ಶೇ.90 ರಷ್ಟನ್ನು ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಯೋಜನೆಗೆ ಪಡೆಯುವುದು.
- ಹಣಕಾಸು ಸಂಸ್ಥೆ / ವಾಣಿಜ್ಯ ಬ್ಯಾಂಕ್‌ಗಳು, ರೀಜನಲ್ ರೂರಲ್ ಬ್ಯಾಂಕ್ (ಪತ್ತಿನ ಸಹಕಾರ ಸಂಘಗಳನ್ನು ಹೊರತುಪಡಿಸಿ) ಗಳಿಂದ ಮಂಜೂರಾದ ಸಾಲದ ಮೇಲೆ, ಇಲಾಖೆ ವತಿಯಿಂದ ರೂ.10.00 ಲಕ್ಷ ಮೀರದಂತೆ ಇರುವ ಯೋಜನೆಗಳಿಗೆ ಯೋಜನಾ ವೆಚ್ಚದ ಮೇಲೆ ಶೇ.60 ರಷ್ಟು ಗರಿಷ್ಠ ರೂ.5.00 ಲಕ್ಷಗಳವರೆಗೂ ಸಹಾಯಧನವನ್ನು ಮಂಜೂರು ಮಾಡಲಾಗುವುದು.

**2. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತರವರಿಂದ ಹಂಚಿಕೆಯಾಗುವ ನಿವೇಶನ/ ಪ್ಲಾಟ್/ ಶೆಡ್‌ಗಳಿಗೆ ರಿಯಾಯಿತಿ**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ಉದ್ದಿಮೆದಾರರಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ/ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮಗಳಿಂದ ಹಂಚಿಕೆಯಾಗುವ 2 ಎಕರೆವರೆಗಿನ ಕೈಗಾರಿಕಾ ನಿವೇಶನ/ ಪ್ಲಾಟ್/ ಶೆಡ್‌ಗಳನ್ನು ಶೇ.75 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

**3. ಅತೀ ಸಣ್ಣ/ಸಣ್ಣ ಕೈಗಾರಿಕಾ ಘಟಕಗಳಿಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ:**

ಈ ಯೋಜನೆಯಡಿ ಪ.ಜಾ/ಪ.ಪಂ. ಉದ್ಯಮಿದಾರರು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಘಟಕ ಸ್ಥಾಪಿಸುವ (ಹೊಸ ಘಟಕ/ ವಿಸ್ತರಣಾ/ ವೈವಿಧ್ದೀಕರಣ/ ಆಧುನೀಕರಣ) ಉದ್ದಿಮೆದಾರಿಗೆ ಒಟ್ಟು ಯೋಜನಾ ವೆಚ್ಚದ ಸ್ಥಿರಾಸ್ಥಿಯ ಮೇಲಿನ ಬಂಡವಾಳ ಹೂಡಿಕೆಯಲ್ಲಿ The Debt Equity Ratio 2:1 ಪ್ರಕಾರ (2/3 ರಷ್ಟು ಬ್ಯಾಂಕ್/ ಹಣಕಾಸು ಸಂಸ್ಥೆಗಳಿಂದ ಸಾಲ ಮತ್ತು 1/3 ಪ್ರವರ್ತಕರ ಬಂಡವಾಳ) ಘಟಕಕ್ಕೆ ಪ್ರವರ್ತಕ ಬಂಡವಾಳ ಹೂಡಿಕೆಯ 1/3 ರಲ್ಲಿ ಶೇ.50 ರಷ್ಟು ಬಡ್ಡಿ ರಹಿತ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು. ಯೋಜನಾ ವೆಚ್ಚ / ಸ್ಥಿರಾಸ್ಥಿ ಮೇಲಿನ ಬಂಡವಾಳ ಹೂಡಿಕೆ ರೂ.10.00 ಕೋಟಿಗೆ ಮೀರದ ಪ್ರಸ್ತಾವನೆಗಳಿಗೆ ಗರಿಷ್ಠ ರೂ.75.00 ಲಕ್ಷಗಳ ವರೆಗೆ ಸಾಫ್ಟ್ ಸೀಡ್ ಕ್ಯಾಪಿಟಲ್ ಆರ್ಥಿಕ ಸಹಾಯ ನೀಡಲಾಗುವುದು.

**4. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಅಧ್ಯಯನ ಪ್ರವಾಸ:**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಉದ್ದಿಮೆದಾರರು ತಮ್ಮ ಕೈಗಾರಿಕೆ ಚಟುವಟಿಕೆಯನ್ನು ಅಭಿವೃದ್ಧಿಪಡಿಸಲು/ ಆಧುನಿಕ / ತಾಂತ್ರಿಕ ನೈಪುಣ್ಯತೆ ಹೊಂದಲು ಹಾಗೂ ಮಾರುಕಟ್ಟೆ ಅಭಿವೃದ್ಧಿಗೆ ಸಹಾಯಕವಾಗಿ ಇತರ ರಾಜ್ಯಗಳು /ಹೊರದೇಶಗಳಿಗೆ ಪ್ರವಾಸ ಕೈಗೊಂಡು ಅಧ್ಯಾಯನ ಮಾಡಲು ತಗಲುವ ಪ್ರವಾಸ ವೆಚ್ಚದಲ್ಲಿ ಸರ್ಕಾರದ ವತಿಯಿಂದ ಶೇ.90ರಷ್ಟು ರಿಯಾಯಿತಿ ಮಂಜೂರು ಮಾಡಲಾಗುವುದು.

- ಅಧ್ಯಯನ ಪ್ರವಾಸವು ಇತರೆ ರಾಜ್ಯಗಳಲ್ಲಿ ಕೈಗೊಂಡಿದ್ದಲ್ಲಿ, ಒಬ್ಬ ಅಭ್ಯರ್ಥಿಗೆ ಗರಿಷ್ಠ ರಿಯಾಯಿತಿ ರೂ.15,000/-ಗಳು ಅಥವಾ ನಿಖರವಾದ ಖರ್ಚು, ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.
- ಅಧ್ಯಯನ ಪ್ರವಾಸವು ಹೊರದೇಶಗಳಲ್ಲಿ ಕೈಗೊಂಡಿದ್ದಲ್ಲಿ ಒಬ್ಬ ಅಭ್ಯರ್ಥಿಗೆ ಗರಿಷ್ಟ ರಿಯಾಯಿತಿ ಶೇ.90 ರಷ್ಟು ಅಥವಾ ರೂ.1,00,000/-ಗಳು ಇವುಗಳಲ್ಲಿ ಯಾವುದು ಕಡಿಮೆಯೋ, ಅದನ್ನು ಪರಿಗಣಿಸಲಾಗುವುದು.

5. **ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳ ಮರುಪಾವತಿ**

ದಿನಾಂಕ:01-04-2017 ರಿಂದ ಮೊದಲ ಬಾರಿಗೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರು ಸ್ಥಾಪಿಸುವ ಸಣ್ಣ ಮತ್ತು ಅತೀ ಸಣ್ಣ ಘಟಕಗಳೂ ಸಾಲ ಪಡೆಯುವ ಸಂದರ್ಭದಲ್ಲಿ ಕೆಎಸ್.ಎಫ್ ಸಿ ಮತ್ತು ಇತರೇ ಹಣಕಾಸು ಸಂಸ್ಥೆಯವರು ವಿಧಿಸಿರುವ ಪರಿಷ್ಕರಣಾ ಶುಲ್ಕ, ಕಾನೂನು ಶುಲ್ಕ, ಏಕಕಾಲಿಕ ಸಾಲ ವಿತರಣಾ ಶುಲ್ಕ ಮತ್ತು ಇತರೆ ಶುಲ್ಕಗಳನ್ನು ಭರಿಸಲಾಗುವುದು.

6. **ವಿದ್ಯುಚ್ಛಕ್ತಿ ಸಹಾಯಧನ:**

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ಯಮಗಳು ದಿನಾಂಕ:01-04-2017 ರಿಂದ ಪ್ರಾರಂಭವಾಗಿರುವ ಹೊಸ ಸಣ್ಣ ಮತ್ತು ಅತೀ ಸಣ್ಣ ಕೈಗಾರಿಕಾ ಘಟಕಗಳಿಗೆ ಮೊದಲ 5 ವರ್ಷಗಳ ಅವಧಿಗೆ ಪ್ರತಿ ಯುನಿಟ್‌ಗೆ 2 ರೂ.ಗಳಷ್ಟು ವಿದ್ಯುಚ್ಛಕ್ತಿ ಸಹಾಯಧನನೀಡಲಾಗುವುದು.

**ಇ. ತೆಂಗಿನ ನಾರಿನ ಕೈಗಾರಿಕೆಗಳನ್ನು ಸ್ಥಾಪಿಸುವ ಉದ್ಯಮಶೀಲರಿಗೆ ಇರುವ ಕಾರ್ಯಕ್ರಮಗಳು**

1. **ತೆಂಗಿನನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ**

ತೆಂಗಿನನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳು ಹಿಂದಿನ 3 ವರ್ಷಗಳಲ್ಲಿ ನಡೆಸಿದ ವಹಿವಾಟಿನ ಸರಾಸರಿಯಲ್ಲಿ ಶೇ 10% ರಷ್ಟು ಮಾರುಕಟ್ಟೆ ಅಭಿವೃದ್ಧಿ ಸಹಾಯಧನವನ್ನು ರಾಜ್ಯ ಸರ್ಕಾರದಿಂದ ನೀಡಲಾಗುವುದು. ಗರಿಷ್ಠ ರೂ.25.00 ಲಕ್ಷ ಪ್ರತಿ ವರ್ಷ, ಗರಿಷ್ಠ 5 ವರ್ಷದವರೆಗೆ.

2. **ತೆಂಗಿನನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗಿನನಾರಿನ ಕುಶಲಕರ್ಮಿಗಳಿಗೆ ಅನುರೂಪ ವೇತನ**

ತೆಂಗಿನ ನಾರಿನ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತೆಂಗಿನನಾರಿನ ಕುಶಲಕರ್ಮಿಗಳು ವಾರ್ಷಿಕ ಕನಿಷ್ಠ 120 ದಿನಗಳು ಕಾರ್ಯನಿರ್ವಹಿಸಿದಲ್ಲಿ ರೂ.10,000/- ರಂತೆ ಅನುರೂಪ ವೇತನವನ್ನು ಸರ್ಕಾರದಿಂದ ನೀಡಲಾಗುವುದು.

**ಈ. ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಕ್ರಮಗಳು**

1. **ಖಾದಿ ಸಂಘಸಂಸ್ಥೆಗಳಿಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ**

ಖಾದಿ ಸಂಘಸಂಸ್ಥೆಗಳು ಉತ್ಪಾದಿಸುವ ಉತ್ಪಾದನೆಯ ಹಿಂದಿನ 3 ವರ್ಷಗಳ ಸರಾಸರಿಯ ಶೇ 15% ಮೊತ್ತವನ್ನು ಮಾರುಕಟ್ಟೆ ಅಭಿವೃದ್ಧಿ ಸಹಾಯಧನವಾಗಿ ನೀಡಲಾಗುವುದು.

2. **ಖಾದಿ ಸಂಘಸಂಸ್ಥೆಗಳ ಕಾರ್ಮಿಕರಿಗೆ ಪ್ರೋತ್ಸಾಹ ಮಜೂರಿ ವೇತನ.**

ಖಾದಿ ಸಂಘಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕ ಪೈಕಿ ನೂಲುಗಾರರಿಗೆ ಪ್ರತಿ ಲಡಿಗೆ ರೂ.3 ಗಳು, ನೇಕಾರರಿಗೆ ಪ್ರತಿ ಮೀಟರ್‌ಗೆ ರೂ.6 ರಿಂದ 7, ಇತರೆ ಕಸಬುದಾರರಿಗೆ ಪ್ರತಿ ದಿನಕ್ಕೆ ರೂ.9.50 ಗಳು, ಖಾದಿ ಕಾರ್ಯಕರ್ತರಿಗೆ ಉತ್ಪಾದನೆ ಮೇಲೆ ಶೇ 9% ಪ್ರೋತ್ಸಾಹವಾಗಿ ನೀಡಲಾಗುವುದು.

**ಉ. ಕರಕುಶಲಕಲೆಗೆ ಬೆಂಬಲ**

1. ಬಿದರಿ ಕಲಾ ಸಂಕೀರ್ಣ, ಬೀದರ್ ನಲ್ಲಿ ನೊಂದಾಯಿತ ಕುಶಲಕರ್ಮಿಗಳಿಗೆ ಶೇ 50% ರಿಯಾಯಿತಿ ದರದಲ್ಲಿ ಬೆಳ್ಳಿ ಮತ್ತು ಸತು ಕಚ್ಚಾವಸ್ತುಗಳ ವಿತರಣೆ.
2. ಶ್ರೀಗಂಧದ ಕುಶಲಕರ್ಮಿಗಳಿಗೆ ಶೇ 50% ರಿಯಾಯಿತಿಯಲ್ಲಿ ಶ್ರೀಗಂಧದ ಕಚ್ಚಾಮಾಲು ವಿತರಣೆ
3. ಸಾಗರದ ಶಿಲ್ಪಗುರುಕುಲ ವಿದ್ಯಾರ್ಥಿಗಳಿಗೆ ತರಬೇತಿ ವೆಚ್ಚ.

**ಊ. ಕೇಂದ್ರ ಸರ್ಕಾರದ ಯೋಜನೆಗಳು:**

1. **ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಕ್ಲಸ್ಟರ್ ಅಭಿವೃದ್ಧಿ ಯೋಜನೆ**

ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಕ್ಲಸ್ಟರ್‌ನ ಗರಿಷ್ಠ ರೂ.20.00 ಕೋಟಿಗಳ ಯೋಜನಾವೆಚ್ಚದ ಪ್ರಸ್ತಾವನೆಗೆ ಕೇಂದ್ರ ಸರ್ಕಾರದಿಂದ ಶೇ.70 ರಷ್ಟು, ರಾಜ್ಯ ಸರ್ಕಾರದಿಂದ ಶೇ.20 ರಷ್ಟು ಅನುದಾನ ನೀಡಲಾಗುವುದು. ಕ್ಲಸ್ಟರ್ ಎಸ್.ಪಿ.ವಿಯು ಶೇ 10% ವೆಚ್ಚವನ್ನು ಭರಿಸಬೇಕಾಗುತ್ತದೆ.

2. **ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ** : (ಕೇಂದ್ರ ಸರ್ಕಾರ)

ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯ (ಪಿಎಂಇಜಿಪಿ) ಮುಖ್ಯ ಉದ್ದೇಶ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ, ಸ್ಥಳೀಯ ಸಂಪನ್ಮೂಲಗಳ ಆಧಾರಿಸಿ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ (ಸೇವಾ ಕ್ಷೇತ್ರ ಮತ್ತು ಉತ್ಪಾದನಾ ಕ್ಷೇತ್ರ) ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವುದು.ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆಯಡಿಯಲ್ಲಿ (ಪಿಎಂಇಜಿಪಿ) ಉತ್ಪಾದನಾ ಚಟುವಟಿಕೆಗೆ ಗರಿಷ್ಠ ರೂ.50 ಲಕ್ಷಗಳ ಯೋಜನ ವೆಚ್ಚದವರೆಗೂ ಹಾಗೂ ಸೇವಾ ಚಟುವಟಿಕೆಗೆ ಗರಿಷ್ಠ ರೂ.20 ಲಕ್ಷಗಳ ಯೋಜನ ವೆಚ್ಚದವರೆಗೂ ಬ್ಯಾಂಕ್ ಮುಖಾಂತರ ಸಾಲ ಸೌಲಭ್ಯ ಒದಗಿಸಲಾಗುವುದು.

1. **ತಯಾರಿಕಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.50.00ಲಕ್ಷ **ಸೇವಾ ಚಟುವಟಿಕೆಗಳಿಗೆ ಗರಿಷ್ಠ ಯೋಜನ ವೆಚ್ಚ** : ರೂ.20.00ಲಕ್ಷ
2. **ಶೈಕ್ಷಣಿಕ ವಿದ್ಯಾರ್ಹತೆ:** ಈ ಯೋಜನೆಯಡಿಯಲ್ಲಿ ತಯಾರಿಕಾ ಚಟುವಟಿಕೆಗಳ ಯೋಜನಾ ವೆಚ್ಚ ರೂ.10.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಹಾಗೂ ಸೇವಾ ಚಟುವಟಿಕೆಗಳ ಯೋಜನಾ ವೆಚ್ಚ ರೂ.5.00 ಲಕ್ಷ ಮತ್ತು ಅದಕ್ಕಿಂತ ಮೇಲ್ಪಟ್ಟ ಯೋಜನೆಗಳನ್ನು ಸ್ಥಾಪಿಸಲು ಅಭ್ಯರ್ಥಿಗಳು ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ ಉತ್ತೀರ್ಣರಾಗಿರಬೇಕು.
3. **ವಯಸ್ಸು :** ಕನಿಷ್ಠ 18 ವರ್ಷ ತುಂಬಿರಬೇಕು
4. **ಪ್ರವರ್ತಕರ ವಂತಿಕೆ:** ಸಾಮಾನ್ಯ ವರ್ಗದ ಉದ್ಯಮಶೀಲರು ಯೋಜನಾ ವೆಚ್ಚದ ಶೇ 10% ರಷ್ಟು ಬಂಡವಾಳವಾಗಿ ತೊಡಗಿಸಬೇಕು. ಉದ್ಯಮಶೀಲರು ಪ.ಜಾತಿ/ ಪ.ಪಂಗಡ / ಹಿಂದುಳಿದ ವರ್ಗ/ ಅಲ್ಪಸಂಖ್ಯಾತ /ಮಾಜಿ ಸೈನಿಕ / ಅಂಗವಿಕಲ/ ಮಹಿಳೆ ಆಗಿದ್ದಲ್ಲಿ ಯೋಜನಾ ವೆಚ್ಚದ ಶೇ 5% ರಷ್ಟು ಬಂಡವಾಳ ತೊಡಗಿಸಬೇಕು.
5. **ಸರ್ಕಾರದಿಂದ ಸಹಾಯಧನ (ರೂ.ಲಕ್ಷಗಳಲ್ಲಿ)**

| ಫಲಾನುಭವಿಗಳ ವರ್ಗೀಕರಣ | ಯೋಜನಾ ವೆಚ್ಚದಲ್ಲಿ ಪ್ರವರ್ತಕರ ವಂತಿಗೆ | ಯೋಜನಾ ವೆಚ್ಚದ ಮೇಲೆ ಅರ್ಹತೆಯಿರುವ ಸಹಾಯಧನ | |
|---|---|---|---|
| | | ನಗರ | ಗ್ರಾಮೀಣ |
| ಸಾಮಾನ್ಯ ವರ್ಗ | ಶೇ.10% | ಶೇ. 15% (ಗರಿಷ್ಠ ರೂ.7.50 ಲಕ್ಷ) | ಶೇ. 25% (ಗರಿಷ್ಠ ರೂ. 12.50 ಲಕ್ಷ) |
| ವಿಶೇಷ ವರ್ಗ (ಪರಿಶಿಷ್ಟ ಜಾತಿ/ ಪರಿಶಿಷ್ಠ ಪಂಗಡ/ ಹಿಂದುಳಿದವರು/ ಅಲ್ಪಸಂಖ್ಯಾತರು/ ಮಹಿಳೆ/ ಮಾಜಿಯೋಧರು/ ಅಂಗವಿಕಲರು) | ಶೇ.5% | ಶೇ. 25% (ಗರಿಷ್ಟ ರೂ.12.50 ಲಕ್ಷ) | ಶೇ. 35% (ಗರಿಷ್ಟ ರೂ. 17.50 ಲಕ್ಷ) |

6. **ಆದಾಯದ ಮಿತಿ:** ಈ ಯೋಜನೆಯಡಿಯಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಸಾಲ ಸೌಲಭ್ಯ ಪಡೆಯಲು ಯಾವುದೇ ಆದಾಯದ ಮಿತಿ ಇರುವುದಿಲ್ಲ.
7. **ಇತರೆ ಷರತ್ತುಗಳು:** ಈ ಯೋಜನೆಯಡಿಯಲ್ಲಿ ಪ್ರಥಮ ಪೀಳಿಗೆ ಉದ್ಯಮಶೀಲರುಗಳು ಪ್ರಾರಂಭಿಸುವ ಹೊಸ ಘಟಕಗಳಿಗೆ ಮಾತ್ರ ಸಹಾಯಧನ ಲಭ್ಯವಿದೆ.

3. **ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ**

ಕೇಂದ್ರ ಸರ್ಕಾರವು ಈ ಯೋಜನೆಯನ್ನು 17/9/2023 ರಿಂದ ಈ ಯೋಜನೆಯನ್ನು ಜಾರಿಗೆ ತಂದಿದ್ದು 18 ಚಟುವಟಿಕೆಗಳ ಸಾಂಪ್ರದಾಯಿಕ ಕುಶಲಕರ್ಮಿಗಳಿಗೆ ಗುರುತಿನ ಚೀಟಿ, ಕೌಶಲ್ಯ ತರಬೇತಿ, ಕೌಶಲ್ಯ ತರಬೇತಿ ಅವಧಿಯಲ್ಲಿ ರೂ.500 ಶಿಷ್ಯವೇತನ, ತರಬೇತಿ ನಂತರ ರೂ.15000 ಮೌಲ್ಯದ ಟೂಲ್‌ಕಿಟ್, ತರಬೇತಿ ನಂತರ ಮೊದಲನೇ ಹಂತದಲ್ಲಿ ಶೇ 5% ಬಡ್ಡಿದರದಲ್ಲಿ ರೂ.1 ಲಕ್ಷದವರೆಗೆ ಭದ್ರತೆ ರಹಿತ ಸಾಲ, ಎರಡನೇ ಹಂತದಲ್ಲಿ ರೂ.2 ಲಕ್ಷದವರೆಗೆ ಸಾಲ ನೀಡಲಾಗುವುದು. ಫಲಾನುಭವಿಗಳು ಪ್ರತಿ ಡಿಜಿಟಲ್ ವಹಿವಾಟಿಗೆ ರೂ.1 ರಂತೆ ಮಾಸಿಕ 100 ವಹಿವಾಟುಗಳಿಗೆ ಪ್ರಚಾರಕ್ಕಾಗಿ ಪ್ರೋತ್ಸಾಹಧನ ನೀಡಲಾಗುವುದು.ಇದರ ಜೊತೆಯಲ್ಲಿ ಗುಣಮಟ್ಟದ ಪ್ರಮಾಣೀಕರಣ, ಬ್ರಾಂಡಿಂಗ್, ಇ-ಕಾಮರ್ಸ್ ಮತ್ತು ಜೆಮ್ ವೇದಿಕೆಗಳಲ್ಲಿ ಆನ್-ಬೋರ್ಡಿಂಗ್, ಜಾಹಿರಾತು, ಪ್ರಚಾರಕ್ಕಾಗಿ ಮಾರುಕಟ್ಟೆ ಬೆಂಬಲ ನೀಡಲಾಗುವುದು.

1. ಬಡಗಿ
2. ದೋಣಿ ತಯಾರಕರು
3. ಕಮ್ಮಾರ
4. ಬೆಳ್ಳಿ ಬಂಗಾರ ಆಭರಣ ತಯಾರಕರು
5. ಕುಂಬಾರ
6. ದರ್ಜಿ

7. ಬುಟ್ಟಿ/ಚಾಪೆ ಹಣೆಯುವವರು
8. ತೆಂಗಿನನಾರಿನ ಕುಶಲಕರ್ಮಿ
9. ಚಮ್ಮಾರ
10. ಕಲ್ಲು ಒಡೆಯುವವರು
11. ಸಾಂಪ್ರದಾಯಿಕ ಗೊಂಬೆ ತಯಾರಿಕರು
12. ಮೀನಿನ ಬಲೆ ತಯಾರಕರು
13. ಧೋಬಿ
14. ಶಿಲ್ಪಿಗಾರರು (ಮರ/ಕಲ್ಲು)
15. ಗಾರೆ ಕೆಲಸಗಾರರು
16. ಉಪಕರಣ ತಯಾರಕರು
17. ಕ್ಷೌರಿಕ
18. ಆರ್ಮರ್

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 259ಕ್ಕೆ ಅನುಬಂಧ-2**

## 2022-23 ಮತ್ತು 2023-24 ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಮಂಜೂರು ಮಾಡಲಾದ ಸೌಲಭ್ಯ ಗಳ ವಿವರಗಳು

| # | ಯೋಜನೆ | 2022-23 | | | 2023-24 | | |
|---|---|---|---|---|---|---|---|
| | | ಘಟಕಗಳ ಸಂಖ್ಯೆ | ಸಾಲ ರೂ.ಲಕ್ಷ | ಸಹಾಯಧನ ರೂ.ಲಕ್ಷ | ಘಟಕಗಳ ಸಂಖ್ಯೆ | ಸಾಲ ರೂ.ಲಕ್ಷ | ಸಹಾಯಧನ ರೂ.ಲಕ್ಷ |
| 1 | ಕೈಗಾರಿಕಾ ನೀತಿ-ಪ್ರೋತ್ಸಾಹ ಮತ್ತು ರಿಯಾಯಿತಿಗಳು | 1,158 | - | 45,181.33 | 1,150 | - | 72,954.63 |
| 2 | ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ | 5,612 | 41,584.73 | 16,106.92 | 4,648 | 4,16,778.37 | 15,696.93 |
| 3 | ಕೆ.ಎಸ್.ಎಫ್.ಸಿ ಬಡ್ಡಿ ಸಹಾಯಧನ | 287 | 36,698.44 | 4,701.30 | 240 | 29,585.28 | 4,749.44 |
| 4 | ವಿಶೇಷ ಘಟಕ ಯೋಜನೆ-60:40 ಸಹಾಯಧನ | 49 | - | 178.93 | 56 | - | 202.15 |
| 5 | ವಿಶೇಷ ಘಟಕ ಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ | - | - | - | 58 | 1,554.29 | - |
| 6 | ಗಿರಿಜನ ಉಪಯೋಜನೆ-60:40 ಸಹಾಯಧನ | 30 | - | 105.69 | 20 | - | 74.62 |
| 7 | ಗಿರಿಜನ ಉಪಯೋಜನೆ-ಸಾಫ್ಟ್ ಸೀಡ್ ಕ್ಯಾಪಿಟಲ್ | - | - | - | 24 | 660.24 | - |